ಒಂದು ಸೇತುವೆಯ ಬಳಿ ಶುಲ್ಕ ವಸೂಲಿ ಮಾಡಬೇಕಾಗುತ್ತದೆ. ರಾಷ್ಟ್ರೀಯ ಹೆದ್ದಾರಿ–೪ರಲ್ಲಿ ಹಿರಣ್ಯಕೇಶಿ ನದಿಗೆ ಅಡ್ಡಲಾಗಿ ನಿರ್ಮಿತವಾಗಿರುವ ಸೇತುವೆಯು ೭೩,೦೦,೦೦೦–೦೦ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿತವಾಗಿದ್ದು, ಘಟಪ್ರಭಾ ಸೇತುವೆಯಿಂದ ೯೦ ಕಿ.ಮೀ.ಗಳ ಒಳಗೆ ಬರುತ್ತದೆ. ಆದುದರಿಂದ ಈ ಸೇತುವೆಯ ಶುಲ್ಕವನ್ನು ಘಟಪ್ರಭಾ ಸೇತುವೆಯ ಶುಲ್ಕ ವಸೂಲಾತಿ ಕಟ್ಟೆಯಲ್ಲಿಯೇ ಮಾಡಬೇಕಾಗುತ್ತದೆ. ಸದರಿ ಘಟಪ್ರಭಾ ಸೇತುವೆಯ ಬಳಿ ಶುಲ್ಕ ವಸೂಲಾತಿ ಕಾರ್ಯಕ್ರಮವನ್ನು ೧೯೮೭ನೇ ಮಾರ್ಚ್ ತಿಂಗಳವರೆಗೆ ಮುಂದುವರೆಸಬೇಕಾಗಬಹುದು.

## ಸಿರಾ ತಾಲ್ಲೂಕಿನಲ್ಲಿ ಹುಣಸೇಹಳ್ಳಿ ಪಿಕ್–ಅಪ್ ನಿರ್ಮಾಣದ ಬಗ್ಗೆ

೧೧೯೦ (ಡಿ) ಶ್ರೀ ಆರ್. ರಾಮಯ್ಯ (ಹಿರಿಯೂರು)— ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿರಾ ತಾಲ್ಲೂಕಿನಲ್ಲಿ ಹುಣಸೇಹಳ್ಳಿ ಪಿಕ್–ಅಪ್ ಯಾವಾಗ ನಿರ್ಮಾಣವಾಯಿತು? ಮತ್ತು ಅನ್ವೇಷಣಾ ಕಾರ್ಯಕ್ಕೆ ವೆಚ್ಚವಾದ ಹಣವೆಷ್ಟು? ಮತ್ತು ಅನ್ವೇಷಣಾ ಕಾರ್ಯವು ಯಾವ ಹಂತದಲ್ಲಿದೆ?

ಆ) ನೀರಾವರಿಗೆ ಒಳಪಡುವ ಜಮೀನಿನ ವಿಸ್ತೀರ್ಣ?

ಇ) ಹಿರಿಯೂರು ತಾಲ್ಲೂಕಿನಲ್ಲಿರುವ ಧರ್ಮಾಪುರ ಕೆರೆಗೆ ನೀರಿನ ಸರಬರಾಜನ್ನು ಹೆಚ್ಚಿಸಲು ಮೇಲಿನ ಪಿಕ್–ಅಪ್‌ನಿಂದ ಪೋಷಕ ಕಾಲುವೆಯನ್ನು ತೆಗೆಯುವ ಯೋಜನೆ ಇತ್ತಾ?

ಈ) ಈ ಕಾರ್ಯವು ಯಾವಾಗ ಮುಗಿಯುತ್ತದೆ?

ಉ) ವಿಳಂಬವಾಗಲು ಕಾರಣಗಳೇನು ?

ಊ) ಪಿಕ್–ಅಪ್‌ಗಳನ್ನು ಯಾವ ಯಾವ ಜಾಗಗಳಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು)—

ಅ) ಸಿರಾ ತಾಲ್ಲೂಕಿನಲ್ಲಿ ಸುವರ್ಣಾಮುಖಿ ನದಿಗೆ ಅಡ್ಡಲಾಗಿ ಹುಣಿಸೇಹಳ್ಳಿ ಪಿಕ್–ಅಪ್ ಇನ್ನೂ ನಿರ್ಮಾಣವಾಗಿಲ್ಲ (ಧರ್ಮಾಪುರ ಕೆರೆಗೆ ಪೋಷಕ ಕಾಲುವೆ ಯೋಜನೆ) ಅನ್ವೇಷಣಾ ಕಾರ್ಯಕ್ಕೆ ಇದುವರೆಗೆ ವೆಚ್ಚವಾದ ಹಣ ೩೧.೫೦೦ ರೂಪಾಯಿಗಳು.

ಯೋಜನೆಯು ಅನ್ವೇಷಣಾ ಕಾರ್ಯವು ಮುಗಿದಿದೆ, ಯೋಜನೆಗೆ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆಯಲು ಯೋಜನೆಯ ನಿದರ್ಶನಾರ್ಥ ವಿವರಗಳನ್ನು ಕೇಂದ್ರ ಜಲ ಆಯೋಗಕ್ಕೆ ಆಗಸ್ಟ್ ೮೧ರಲ್ಲಿ ಕಳುಹಿಸಲಾಯಿತು. ಈ ಸಂಬಂಧದಲ್ಲಿ ಕೇಂದ್ರ ಜಲ ಆಯೋಗದ ಟೀಕೆಗಳಿಗೆ ಉತ್ತರಗಳನ್ನು ಯೋಜನೆಯ ಪರಿಷ್ಕೃತ ಅಂದಾಜಿನೊಂದಿಗೆ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗುತ್ತದೆ.

ಆ) ೬೦೦೦ ಎಕರೆಗಳು.

ಇ) ಇದೆ.

ಈ) ಯೋಜನೆಯ ಕಾರ್ಯವು ಇನ್ನೂ ಪ್ರಾರಂಭವಾಗಿಲ್ಲ.

ಉ) ಕೇಂದ್ರ ಸರ್ಕಾರದ ಅನುಮತಿಗಾಗಿ ಕಾಯಲಾಗಿದೆ.

ಊ) ಸದರಿ ಯೋಜನೆಯ ಪ್ರಕಾರ ಪಿಕ್–ಅಪ್‌ನ್ನು ಹುಣಿಸೇಹಳ್ಳಿ ಹತ್ತಿರ ಸುವರ್ಣಮುಖಿ ನದಿಗೆ ಅಡ್ಡಲಾಗಿ ನಿರ್ಮಿಸಲು ಉದ್ದೇಶಿಸಲಾಗಿದೆ.